# ॥ ಶ್ರದ್ಧಾಂ ಹವಾಮಹೇ ॥

ಕೆ.ಎಸ್. ರಮಾ

**ಶ್ರದ್ಧೆ ಜೀವನದ ಮೂಲಭೂತ ಆವಶ್ಯಕತೆ.
ವ್ಯಾವಹಾರಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳೆರಡರಲ್ಲೂ
ಅದರ ಮಹತ್ವವನ್ನು ವಿವರಿಸಿರುವ ಶ್ರೀಮತಿ ಕೆ.ಎಸ್.ರಮಾ
ಅವರು ಬೆಂಗಳೂರಿನ ಕಾಲೇಜೊಂದರಲ್ಲಿ
ಸಂಸ್ಕೃತ ಪ್ರಾಧ್ಯಾಪಕರಾಗಿರುವರು.**

ಶ್ರದ್ಧಾಂ ಪ್ರಾತರ್ಹವಾಮಹೇ ಶ್ರದ್ಧಾಂ ಮಧ್ಯಂದಿನಂ ಪರಿ ।
ಶ್ರದ್ಧಾಂ ಸೂರ್ಯಸ್ಯ ನಿಮ್ರುಚಿ ಶ್ರದ್ಧೇ ಶ್ರದ್ಧಾಪಯೇಹ ನಃ ॥

ಋಗ್ವೇದದ ಈ ಮಂತ್ರವು ಶ್ರದ್ಧೆಯನ್ನು ಪ್ರಾತಃಕಾಲದಲ್ಲಿ, ಮಧ್ಯಾಹ್ನದಲ್ಲಿ ಸೂರ್ಯಾಸ್ತ ಕಾಲದಲ್ಲಿ ಪೂಜಿಸುತ್ತಾ, "ಹೇ ಶ್ರದ್ಧೆಯೇ, ನಮ್ಮನ್ನು ಶ್ರದ್ಧಾವಂತರಾಗಿ ಮಾಡು" ಎಂದು ಬೇಡುತ್ತದೆ. *ಶ್ರದ್ಧಾ ಕಾಮಯಾನಿ* ಈ ಮಂತ್ರಕ್ಕೆ ಋಷಿಕೆ. ಶ್ರದ್ಧೆಯನ್ನು ಕಾಮಿಸುವವಳು, ಬಯಸುವವಳು ಎಂಬ ಅರ್ಥದ ಋಷಿಕೆಯ ಹೆಸರೇ ತೃಷ್ಣಾ ಎಂಬ ಗುಣದ ಆವಶ್ಯಕತೆಯನ್ನು ತಿಳಿಸುತ್ತದೆ. ಶ್ರದ್ಧೆಯನ್ನು ಕಾಮಿಸುವುದು, ಶ್ರದ್ಧೆಯ ತತ್ತ್ವವಾದ ಸತ್ಯದ ಅನ್ವೇಷಣೆಯನ್ನು ಮಾಡುವುದು ಜೀವನದ ಗುರಿಯಾಗಿ ಉಳ್ಳವಳು ಶ್ರದ್ಧಾ ಕಾಮಯಾನಿ. ಶ್ರದ್ಧೆಯೆಂಬ ಮಾನಸಿಕ ಸ್ಥಿತಿ, ಜೀವನದ ಪ್ರತಿಯೊಂದು ಕಾರ್ಯಗಳಿಗೂ ಮೂಲ. ಮಾನವನ ಜೀವನಕ್ಕೆ ಅರ್ಥವನ್ನು ಕೊಡುವ ಮೂಲ ಮಂತ್ರ ಶ್ರದ್ಧೆ.

ಮನುಷ್ಯನ ಜೀವನ ಒಂದು ತಪೋಭೂಮಿ. ತಪಸ್ಸು ಎಂದರೆ "ತಪಿಸುವುದು", ಹಂಬಲಿಸುವುದು, ಮತ್ತೆ ಮತ್ತೆ ತನ್ನ ಇಷ್ಟ ವಸ್ತುವಿನಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಆ ಇಷ್ಟಪ್ರಾಪ್ತಿಗಾಗಿ ಪ್ರಯತ್ನಿಸುವುದು. ಒಬ್ಬನು ಐಹಿಕ ಸುಖಭೋಗಗಳಾದ ಸಂಪತ್ತು, ಸಂಸಾರ, ಸಂತಾನಗಳಿಗೆ ನಿರಂತರ ತಪಸ್ಸು ಮಾಡಿದರೆ, ಭಗವಂತನ ಸಾಕ್ಷಾತ್ಕಾರಕ್ಕಾಗಿ, ಆತ್ಮೋನ್ನತಿಗಾಗಿ ಮತ್ತೊಬ್ಬನು ತಪಸ್ಸನ್ನಾಚರಿಸುವನು. ಪುರಾಣಗಳಲ್ಲಿ ದೇವತೆಗಳು, ದಾನವರೂ ಸಹ ತಪಸ್ಸನ್ನಾಚರಿಸುವುದನ್ನು ನೋಡುತ್ತೇವೆ. ಈ ತಪಸ್ಸಿಗೆ ಶಕ್ತಿ ಯಾವುದು? ಈ ಮೂಲಶಕ್ತಿಯೇ ಶ್ರದ್ಧೆ. ತಪಸ್ಸಿಗೆ ಫಲ ಇಷ್ಟ ಪ್ರಾಪ್ತಿಯಾದರೆ ಮೂಲಶಕ್ತಿ ಶ್ರದ್ಧೆ.

**ಶ್ರದ್ಧಾವಾನ್ ಲಭತೇ ಜ್ಞಾನಂ**—"ಶ್ರದ್ಧೆಯಿರುವವನೇ ಜ್ಞಾನವನ್ನು ಸಂಪಾದಿಸುತ್ತಾನೆ." ಉಪನಿಷತ್ತುಗಳು ಭಾರತೀಯ ಸಂಸ್ಕೃತಿಯ ಶಿಖರಗಳು. ಇಲ್ಲಿ ಭಾರತೀಯ ವಿದ್ಯಾಭ್ಯಾಸ ಪದ್ಧತಿಯ ಒಂದು ನೋಟವನ್ನು ಕಾಣುತ್ತೇವೆ. ಪ್ರಶ್ನೋಪನಿಷತ್ತಿನಲ್ಲಿ ಗುರುವನ್ನು ಸಮೀಪಿಸುವ ವಿದ್ಯಾರ್ಥಿಗಳಿಗೆ ಗುರುಗಳು, "ಒಂದು ವರ್ಷ ಕಾಲ ನನ್ನ ಬಳಿ ತಪಸ್ಸು, ಬ್ರಹ್ಮಚರ್ಯವನ್ನು ಪಾಲಿಸುತ್ತಾ ಶ್ರದ್ಧೆಯಿಂದ ವಿದ್ಯಾಕಾಂಕ್ಷಿಗಳಾಗಿ ಇರಿ. ಆನಂತರ ನಮ್ಮನ್ನು ಪ್ರಶ್ನಿಸಿ. ನಮಗೆ ತಿಳಿದಿದ್ದರೆ ನಾವು ನಿಮಗೆ ಆ ಜ್ಞಾನವನ್ನು ತಿಳಿಸುವೆವು"—**ತಾನ್ ಹ ಸ ಋಷಿರುವಾಚ ಭೂಯ ಏವ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ ಸಂವತ್ಸ್ಯಥ; ಯಥಾಕಾಮಂ ಪ್ರಶ್ನಾನ್ ಪೃಚ್ಛತ ; ಯದಿ ವಿಜ್ಞಾಸ್ಯಾಮಃ ಸರ್ವಂ ಹ ವೋ ವಕ್ಷ್ಯಾಮಃ ॥** ಎಂದು ಹೇಳುವರು. ವಿದ್ಯಾರ್ಥಿ ಒಂದು ವರ್ಷ ಕಾಲ ಗುರುಕುಲದಲ್ಲಿ, ವಿದ್ಯಾಪೇಕ್ಷಿಯಾಗಿ, ಶ್ರದ್ಧೆಯಿಂದ ಕಾಯಬೇಕು. ಗುರುಕುಲದ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿ ತನಗೆ ಕಲಿಯುವುದರಲ್ಲಿರುವ ಶ್ರದ್ಧೆಯನ್ನು ತೋರಿಸಬೇಕು. ಇದೊಂದು ಅರ್ಹತಾ ಪರೀಕ್ಷೆ (*eligibility test*). ಇದರಲ್ಲಿ ಗೆದ್ದರೆ ವಿದ್ಯಾಭ್ಯಾಸ. ಈ ಶ್ರದ್ಧೆ, ಸಹನೆ ಕಷ್ಟಗಳನ್ನೆದುರಿಸುವ ಶಕ್ತಿಯನ್ನು ನೀಡುತ್ತದೆ. **ವಿದ್ಯಾರ್ಥಿನಃ ಕುತಃ ಸುಖಮ್**— ವಿದ್ಯಾರ್ಥಿಯಾದವನಿಗೆ ಸುಖ ಎಲ್ಲಿಯದು? ಎಂಬ ಉಕ್ತಿ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಯು ಕಷ್ಟವನ್ನೆದುರಿಸಬೇಕು ಎನ್ನುವುದನ್ನು ತಿಳಿಸುತ್ತದೆ. ಈ ಕಷ್ಟಸಹಿಷ್ಣುತೆ ಶ್ರದ್ಧೆ ಇದ್ದಲ್ಲಿ ಮಾತ್ರ ಸಾಧ್ಯ. ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ವಿದ್ಯಾರ್ಥಿಗಳಲ್ಲಿ ಕಲಿಯುವ ಶ್ರದ್ಧೆ ಇದೆಯೇ ಎನ್ನುವುದನ್ನು ನೋಡುವುದಿಲ್ಲ. ಹೀಗೆ ಶ್ರದ್ಧೆಯ ಆವಶ್ಯಕತೆಯನ್ನು ಗಮನಿಸದೆ ಇರುವುದರಿಂದ ವಿದ್ಯಾಭ್ಯಾಸದ ಮೌಲಿಕತೆಯ ಅಥವಾ ಗುಣಮಟ್ಟದ ಕೊರತೆಯುಂಟಾಗುತ್ತಿದೆ.

ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಶ್ರದ್ಧೆಯು ಮೂಲಸ್ರೋತವಾಗಿದೆ. ವೇದಾಧ್ಯಯನವನ್ನು ಮುಗಿಸಿ, ಜ್ಞಾನ ಸರಿತ್ತಿನಲ್ಲಿ ಮಿಂದು ಸ್ನಾತಕನಾಗುವ ಶಿಷ್ಯನಿಗೆ ಆಚಾರ್ಯರು ಅವನ ಮುಂದಿನ ಜೀವನದಲ್ಲಿ, ಗೃಹಸ್ಥನಾಗಿ ಸಮಾಜದ ಜವಾಬ್ದಾರಿಯನ್ನು ಹೊರಲು ಸಿದ್ಧತೆಯನ್ನು ಮಾಡಿಕೊಡುವ ತಿಳುವಳಿಕೆಯನ್ನು, ತೈತ್ತಿರೀಯ ಉಪನಿಷತ್ತಿನ "ಅನುಶಾಸನ"ದಲ್ಲಿ ಕೊಡುತ್ತಾರೆ. ಅದರಲ್ಲಿ ಒಂದುಮಾತು **ಶ್ರದ್ಧಯಾ ದೇಯಂ। ಅಶ್ರದ್ಧಯಾಽದೇಯಂ**—"ಕೊಡುವುದನ್ನು ಶ್ರದ್ಧೆಯಿಂದ ಕೊಡು, ಶ್ರದ್ಧೆಯಿಲ್ಲದಿದ್ದರೆ ಕೊಡ

*ಸಾ (ಶ್ರದ್ಧಾ) ಹಿ ಜನನೀ ಇವ ಕಲ್ಯಾಣೀ ಯೋಗಿನಂ ಪಾತಿ ।*

**"ಕಲ್ಯಾಣಕಾರಿಯಾದ ಶ್ರದ್ಧೆಯು ತಾಯಿಯಂತೆ ಯೋಗಿಯನ್ನು ರಕ್ಷಿಸುತ್ತದೆ"**

*— ಯೋಗಸೂತ್ರಗಳಿಗೆ ಬರೆದ ವ್ಯಾಸಭಾಷ್ಯದಲ್ಲಿ*

ಬೇಡ" ಎಂದು ತಿಳಿಸುತ್ತದೆ. ದಾನವನ್ನು ಕೊಡುವಾಗ ಶ್ರದ್ಧೆಯಿಂದ ಉತ್ಕೃಷ್ಟವಾದುದನ್ನು ಕೊಡಬೇಕು. ಶ್ರದ್ಧೆಯಿಲ್ಲದಿದ್ದರೆ ಕೊಡುವ ವಸ್ತುವಿನ ಗುಣಾವಗುಣಗಳ ವಿವೇಚನೆ ಇರುವುದಿಲ್ಲ. ದಾನ ಕೊಡ ಬೇಕು, ಏನೋ ಒಂದು ಕೊಟ್ಟರಾಯಿತು, ಎನ್ನುವ ಭಾವನೆ ಇರಕೂಡದು. ಶ್ರದ್ಧೆ ಕೊಡುವವನ ಮನಸ್ಥಿತಿಯನ್ನು, ಧ್ಯೇಯವನ್ನು ಅವಲಂಬಿಸುತ್ತದೆ. ಕೊಟ್ಟ ವಸ್ತುವಿನ ಸದುಪಯೋಗದ ಚಿಂತನೆ ಯನ್ನು ಮಾಡುತ್ತದೆ. ದಾನಿಯ ಮನಸ್ಸಿನಲ್ಲಿ ಪ್ರೀತಿ, ವಿಶ್ವಾಸ, ಕರುಣೆ ಮುಂತಾದ ಗುಣಗಳನ್ನು ರೂಪಿಸುವುದು ಶ್ರದ್ಧೆ ಎಂಬ ಮಹಾಶಕ್ತಿ.

ಶ್ರದ್ಧೆಯು ಮಾನವನು ಕಾರ್ಯತತ್ಪರನಾಗಲು ಪ್ರೇರೇಪಿಸುವ ಅಂತಃಶಕ್ತಿಯಾಗುತ್ತದೆ. ಮನುಷ್ಯನನ್ನು ವಿಷ್ಣುಪುರಾಣವು—ಮನುಷ್ಯಾಃ ಸಾಧಕಾಸ್ತು—ಎಂದು ವರ್ಣಿಸುತ್ತದೆ. ಅಂದರೆ ಸರ್ವತೋಮುಖ ಅಭಿವೃದ್ಧಿಗಾಗಿ ಸದಾಕಾಲವೂ ಪ್ರಯತ್ನ ಪಡು ವವನು ಎಂದು. ಈ ಪ್ರಯತ್ನಶೀಲತೆ ಮಾನವನ ಗುಣ. ಚಿಂತನಾ ಶೀಲನಾದ ಮಾನವನ ಶಕ್ತಿಯು ಕ್ರಿಯಾತ್ಮಕವಾಗಬೇಕಾದರೆ ಶ್ರದ್ಧೆಯ ಪ್ರಾದುರ್ಭಾವವಾಗಬೇಕು. ಪ್ರಯತ್ನವಿಲ್ಲದೆ ಕಾರ್ಯ ಸಾಧನೆಯಾಗುವುದಿಲ್ಲ. ಪ್ರಯತ್ನಕ್ಕೆ ಪ್ರವೃತ್ತಿಯುಂಟಾಗುವುದೇ ಶ್ರದ್ಧೆಯಿಂದ.

ಶ್ರದ್ಧೆ ಎನ್ನುವುದು ಮಾನವನ ವೈಯಕ್ತಿಕ ಶಕ್ತಿಯ ರೂಢಮೂಲವಾದ ಕೇಂದ್ರ.

— ವಿಲಿಯಂ ಜೇಮ್ಸ್

ಶ್ರದ್ಧೆ ದೇವತಾತ್ಮಕವಾದರೆ ದೈವಭಕ್ತಿಯ ರೂಪ ತಾಳುತ್ತದೆ. ಜ್ಞಾನದಾಹಿಯಾದರೆ ಜ್ಞಾನವನ್ನು ನೀಡುತ್ತದೆ. ಇತರರ ಹಿತಾಸಕ್ತಿಗೆ, ಪರೋಪಕಾರಕ್ಕೆ ಒಲಿದರೆ ಸಮಾಜಸೇವಕನನ್ನು ರೂಪಿಸುತ್ತದೆ. ಮನಸ್ಸಿನ ಒಳಪದರಗಳನ್ನು ಅರಿಯಲು ಯತ್ನಿಸಿ ಅಂತರ್ಮುಖಿ ಯಾದರೆ ಆತ್ಮೋನ್ನತಿಯನ್ನು ಸಾಧಿಸುತ್ತದೆ.

ಶ್ರದ್ಧೆಗೂ ಮೂಢನಂಬಿಕೆಗೂ ಬಹಳ ಅಂತರವಿದೆ. ಶ್ರದ್ಧೆ ಯೆನ್ನುವುದು ದೇವರಲ್ಲಿಟ್ಟ ನಂಬಿಕೆಗೆ ಮಾತ್ರ ಎಂದು ಅರ್ಥೈಸ ಬಾರದು. ಶ್ರದ್ಧೆ ಜೀವನದ ನಿಷ್ಠೆ. ಮೂಢನಂಬಿಕೆ ಅಥವಾ ಅಂಧ ಶ್ರದ್ಧೆ ಜೀವನದ ಬಗ್ಗೆ ಅನಿರ್ದಿಷ್ಟತೆ. ಶ್ರದ್ಧೆಯು ಆತ್ಮವಿಶ್ವಾಸದಿಂದ ಜನಿಸಿದರೆ ಮೂಢನಂಬಿಕೆ ಭಯದಿಂದ ಹುಟ್ಟುತ್ತದೆ.

ನಮ್ಮ ಸುತ್ತಲೂ ಕೆಲವು ಕಾರ್ಯಗಳು ಸಾವಿರಾರು ವರ್ಷಗಳಿಂದ ನಡೆಯುತ್ತಲೇ ಬರುತ್ತಿವೆ. ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ. ಭೂಮಿಯ ಚಲನೆಯಿಂದ ದಿನರಾತ್ರಿಗಳು ಅನವರತವಾಗಿ ಆಗುತ್ತವೆ. ಋತುಗಳು, ಸಂವತ್ಸರಗಳು ಉಂಟಾಗುತ್ತವೆ. ವಾಯುವಿನಲ್ಲಿ ಬೀಸುವ ಶಕ್ತಿ ಇದೆ. ಅಗ್ನಿಯ ದಾಹಕಶಕ್ತಿ ಅನಾದಿಯಿಂದಲೂ ಕುಂದದೆ ಇದೆ. ಹೀಗೆ ನಮ್ಮ ಸುತ್ತಲಿನ ಪರಿಸರದ ಪಂಚಭೂತಗಳ (ನೀರು, ಅಗ್ನಿ, ಆಕಾಶ, ಭೂಮಿ, ವಾಯುಗಳು) ಈ ಜಗತ್ತು ಒಂದು ನಿರಂತರ ಅಚ್ಚೆಗೆ ಒಳಪಟ್ಟಿದೆ. ಅದೇ "ಋತ". ಈ "ಋತ" ಮಾನವನ ಒಳಿತಿಗಾಗಿಯೇ ದೈವನಿರ್ಮಿತವಾಗಿದೆ. ಇದರಲ್ಲಿ ನಂಬಿಕೆ ಇಡುವುದು ಶ್ರದ್ಧೆಯ ರೂಪ. ಈ ಶ್ರದ್ಧೆಯು ಕುಂಠಿತವಾದರೆ ಪರಿಸರ ನಾಶವಾಗುತ್ತದೆ. ಪರಿಸರ ನಮ್ಮ ಶ್ರೇಯಸ್ಸಿಗೆ ಬಳಕೆಯಾಗದೆ ಸ್ವಾರ್ಥಕ್ಕೆ ಬಲಿಯಾಗಿ, ಪರಿಸರವನ್ನು ದೇವರೆಂದು ಪೂಜಿಸಿದ ಆರ್ಯಧರ್ಮದ ಉನ್ನತ ಧ್ಯೇಯವು ಮರೆಯಾಗುತ್ತದೆ. ಪ್ರಪಂಚದಾದ್ಯಂತ ಪರಿಸರ ರಕ್ಷಣೆಯ ಕೂಗು, ಪರಿಸರನಾಶದ ಅವಾಂತರಗಳ ಬಗ್ಗೆ ಚರ್ಚೆಗಳಾಗುತ್ತಿವೆ. ಪರಿಸರವನ್ನು ಕಾಪಾಡಲು ಕಾರ್ಯಕ್ರಮಗಳೂ ನಡೆಯುತ್ತಿವೆ. ಆದರೆ "ಪರಿಸರ ದೈವನಿರ್ಮಿತ ವಾದುದು, ಅದು ನಮ್ಮ ಒಳಿತಿಗಾಗಿಯೇ ಸಂರಕ್ಷಿಸಲ್ಪಡಬೇಕು" ಎಂಬ ಶ್ರದ್ಧೆಯಿಲ್ಲದಿದ್ದರೆ ಈ ನಿಟ್ಟಿನಲ್ಲಿ ಕೈಗೊಳ್ಳುವ ಯಾವ ಕಾರ್ಯವೂ ಫಲಿಸುವುದಿಲ್ಲ. ದೈವದತ್ತವಾದ ಸಮೃದ್ಧ ಪರಿಸರವನ್ನು ಹಣದಾಸೆಗಾಗಿ ದುರುಪಯೋಗಪಡಿಸಿಕೊಳ್ಳುವಾಗ ಶ್ರದ್ಧೆಯು ಲುಪ್ತ ವಾಗುತ್ತದೆ. ಅಶ್ರದ್ಧೆಯೇ ಅಶ್ರೇಯಸ್ಸು.

ಶ್ರದ್ಧೆಯು ನಂಬಿಕೆ, ವಿಶ್ವಾಸ, ಬಯಕೆ, ಅಪೇಕ್ಷೆ, ಹಂಬಲ, ಆದರ—ಇವೇ ಮುಂತಾದ ಅರ್ಥಗಳನ್ನು ಒಳಗೊಂಡಿದೆ. ಶ್ರತ್ ಧಾತುವಿನಿಂದ ಉತ್ಪನ್ನವಾದ ಶ್ರದ್ಧೆ ಸತ್ಯದ ರೂಪ.

ನಾವು ನಡೆಯುವುದು ಶ್ರದ್ಧಾಶಕ್ತಿಯಿಂದ, ದೃಷ್ಟಿಶಕ್ತಿಯಿಂದಲ್ಲ.

— ಹೊಸ ಒಡಂಬಡಿಕೆ

ಶಾಕುಂತಲಾ ನಾಟಕದ ಏಳನೆಯ ಅಂಕದಲ್ಲಿ ಶಕುಂತಲಾ, ದುಷ್ಯಂತ ಮತ್ತು ಮಗು ಭರತನ ಸಮ್ಮಿಲನವನ್ನು ಕಾಳಿದಾಸನು ಶ್ರದ್ಧಾ, ವಿಧಿ, ವಿತ್ತಗಳ ಮಿಲನವೆಂದು ಬಣ್ಣಿಸಿದ್ದಾನೆ. ಈ ಮೂರೂ ಯಜ್ಞಕ್ಕೆ ಆವಶ್ಯಕ. ಯಜ್ಞವು ಪೂಜೆ, ತ್ಯಾಗಗಳ ರೂಪ. ಇದಕ್ಕೆ ಬೇಕಾಗಿರುವುದು ಮೂಲಶ್ರದ್ಧೆ. ಶಕುಂತಲೆಯು ಶ್ರದ್ಧೆಯ ಪ್ರತೀಕ. ದುಷ್ಯಂತನು ವಿಧಿಯ, ನಿಯಮಗಳ, ಸಚ್ಚಾರಿತ್ರ್ಯದ ಪ್ರತೀಕ. ಅದರ ಫಲ ವಿತ್ತ—ಮಗು; ಭರತ. ಯಜ್ಞವು ಸಾಧ್ಯವಾಗಬೇಕಾದರೆ ಸಾಧನ ಶ್ರದ್ಧೆ.

ದಾಸರು "ನಂಬಿ ಕೆಟ್ಟವರಿಲ್ಲವೋ ನಿನ್ನ, ನಂಬದೆ ಕೆಟ್ಟರೆ ಕೆಡಲಿ" ಎಂದು ಹಾಡಿದರು. ಈ ನಂಬಿಕೆ ಶ್ರದ್ಧಾಮೂಲವಾದುದು. ಭಗ ವಂತನಲ್ಲಿ ಭಕ್ತನಿಗೆ ನಂಬಿಕೆ, ತಂದೆ, ತಾಯಿ, ಮಕ್ಕಳ ಪರಸ್ಪರ ನಂಬಿಕೆ, ಸ್ನೇಹ ವಿಶ್ವಾಸಗಳ ನಂಬಿಕೆ, ವ್ಯಾಪಾರ ವ್ಯವಹಾರಗಳಲ್ಲಿ ನಂಬಿಕೆ, ಮಾನವನ ಆತ್ಮಗುಣಗಳಲ್ಲಿ ನಂಬಿಕೆ—ಹೀಗೆ ಪ್ರಪಂಚವೇ ನಂಬಿಕೆಯ ಮೇಲೆ ನಿಂತಿದೆ. ಇದರ ಆಧಾರ ಶ್ರದ್ಧೆ. ಜೀವನದಲ್ಲಿ ನೊಂದ ವ್ಯಕ್ತಿಗೆ ಭರವಸೆಯನ್ನು ನೀಡುವುದು ಶ್ರದ್ಧೆ. ಜೀವಿಗಳಲ್ಲಿರುವ ಚೇತನಾ ರೂಪಿಣಿ ಶ್ರದ್ಧಾದೇವಿ. ಮತ್ತೊಮ್ಮೆ ಅವಳ ಮೊರೆ ಹೋಗೋಣ:

ಯಾ ದೇವೀ ಸರ್ವಭೂತೇಷು ಶ್ರದ್ಧಾರೂಪೇಣ ಸಂಸ್ಥಿತಾ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

*

ನಾವು ನೋಡದಿರುವುದನ್ನು ನಂಬುವುದೇ ಶ್ರದ್ಧೆ, ಮತ್ತು ನಾವು ನಂಬಿದುದನ್ನು ನೋಡುವುದೇ ಈ ಶ್ರದ್ಧೆಯ ಫಲ.

— ಸಂತ ಆಗಸ್ಟೀನ್ (St.Augustine).